ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಪ್ರಕಟಣೆ

ಅಧ್ಯಕ್ಷರು.— ವಿಧಾನ ಪರಿಷತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.

" ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ಸಡವಳಿಕೆಯ ನಿಯಮ ೧೧೪ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ ೧೦.೯.೧೯೮೭ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

೧) ಕರ್ನಾಟಕ ಅರಣ್ಯ ಉತ್ಪನ್ನವನ್ನು ಸರ್ಕಾರದಿಂದ ಸರಬರಾಜು ಮಾಡುವ (ಒಪ್ಪಂದಗಳ ಪರಿಷ್ಕರಣ) ವಿಧೇಯಕ, ೧೯೮೭.

೨) ಕರ್ನಾಟಕ ಮಾರಾಟ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, ೧೯೮೭.

ಅರ್ಧ ಗಂಟೆ ಕಾಲ ಚರ್ಚೆ

ಕರ್ನಾಟಕ ಆಗ್ರೊ ಕಾರ್ಸ್ ಕಂಪನಿಯು ನಿಯಮಿತದಲ್ಲಿನ ನೌಕರರಂಗಳಿಗೆ ಕೊಡುತ್ತಿರುವ ಕಿರುಕುಳದ ಬಗ್ಗೆ

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ) —ಸನ್ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಸರ್ಕಾರದ ವತಿಯಿಂದ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಯಾವುದೇ ಒಂದು ಉದ್ಯಮವನ್ನು ಸ್ಥಾಪನೆ ಮಾಡಲಿ, ಆ ಉದ್ಯಮದಲ್ಲಿ ಈ ರಾಜ್ಯದ ಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಸಿಗಬೇಕೆಂ ಮತ್ತು ಅವರ ಬೇಡಿಕೆಗಳನ್ನು ಪೂರೈಸತಕ್ಕಂಥ ವ್ಯವಸ್ಥೆ ಆಗಬೇಕೆಂಬ ಉದ್ದೇಶದಿಂದ ಈ ಉದ್ಯಮಗಳನ್ನು ಪ್ರಾರಂಭ ಮಾಡುತ್ತದೆ. ಆದರೆ ೧೯೭೩-೭೪ರಲ್ಲಿ ಈ ಆಗ್ರೊ ಕಾರ್ಸ್ ಕಂಪನಿ ಎನ್ನತಕ್ಕಂಥ ಕಂಪನಿಯನ್ನು ಪ್ರಾರಂಭ ಮಾಡಿದರು. ಈ ಕಂಪನಿಯಲ್ಲಿ ಒಟ್ಟು ೫೩ ಜನ ಉದ್ಯೋಗಸ್ಥರು ಇದ್ದಾರೆ. ಅವರಿಗೆ ಉದ್ಯೋಗ ಕೊಡತಕ್ಕದ್ದರಲ್ಲಿ ಈ ರಾಜ್ಯದ ಜನರಿಗೆ ಆದ್ಯತೆಯನ್ನು ಕೊಡತಕ್ಕದ್ದು ಸೂಕ್ತ.

ಈಗ ಏನಾಗಿದೆ ಎಂದರೆ, ಅಲ್ಲಿ ೩೦ ಜನ ಹೊರಗಿನವರು ಇದ್ದಾರೆ. ಈ ರಾಜ್ಯದಲ್ಲಿ ಎಷ್ಟು ಅರ್ಹತೆ ಉಳ್ಳವರು ಇದ್ದರೂ ಕೂಡ ಹೊರಗಿನವರಿಗೆ ಆದ್ಯತೆ ಕೊಡಲಾಗಿದೆ. ಮೇಲಧಿಕಾರಿಗಳೆಲ್ಲಾ ಹೊರಗಿನವರಾಗಿರುವುದರಿಂದ, ಅವರ ಕೈಕೆಳಗೆ ಕೆಲಸ ಮಾಡತಕ್ಕಂಥ ಬೇರೆ ಅಧಿಕಾರ ವರ್ಗದವರು ಈ ರಾಜ್ಯದವರಾಗಿರುವುದರಿಂದ, ಮೇಲಧಿಕಾರಿಗಳ ತಾಳಕ್ಕೆ ಯಾರೂ ಕಾಲು ಹಾಕುವುದಿಲ್ಲ. ಅವರ ವೈಯಕ್ತಿಕ ಹಿತಾಸಕ್ತಿಗಳಿಗೆ ಯಾರು ಸಹಕರಿಸುವುದಿಲ್ಲ, ಈ ಬಡ ನೌಕರರಿಗೆ ಕಿರುಕುಳ ಆಗುತ್ತಿರತಕ್ಕಂತಾದ್ದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಉದಾಹರಣೆಗೆ ಅಲ್ಲಿ ಅಂದರೆ ಕರ್ನಾಟಕ ಆಗ್ರೊ ಕಾರ್ಸ್ ಕಂಪನಿಯ ಕಾರ್ಮಿಕರ ಸಂಘ ಇದೆ. ಅಲ್ಲಿ ಕೆಲಸ ಮಾಡತಕ್ಕಂಥ ನೌಕರರಿಗೆ ಅಧಿಕಾರಿಗಳು ತಾರತಮ್ಯ ತೋರಿಸುತ್ತಿದ್ದಾರೆಂದು ತಿಳಿದು ಬಂದಿದೆ. ಅವರು ತಮಗೆ ಆಗುತ್ತಿರುವ ಕಿರುಕುಳದ ಬಗ್ಗೆ, ೮ ಬೇಡಿಕೆಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಇಲ್ಲಿ ಒಂದನ್ನು ಹೇಳುತ್ತೇನೆ. ಅಧಿಕ ಕಾಲದ ಭತ್ಯವನ್ನು ತಮಗೆ ಬೇಕಾದವರಿಗೆ ಕೊಡುತ್ತಾರೆ. ಉಳಿದ ಕಾರ್ಮಿಕರಿಗೆ ಅಧಿಕ ಕಾಲದ ಭತ್ಯವನ್ನು ಕೊಡುವುದಿಲ್ಲ. ಅವರು ಕೊಡುವ ಕಾರಣ ನಿವು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂಬ ಒಂದೇ ನೆಪ ಹೇಳುತ್ತಾರೆ. ಈ ಅಧಿಕ ಕಾಲದ ಭತ್ಯ ಕೊಡುವಾಗ ಆಗುತ್ತಿರುವ ಈ ಅನ್ಯಾಯವನ್ನು, ತಾವು ಖುದ್ದಾಗಿ ಪರಿಶೀಲಿಸಿ, ನಮಗೆ ನ್ಯಾಯವನ್ನು ಕೊಡಬೇಕೆಂದು ಕೇಳಿದ್ದಾರೆ. ಎಲ್ಲಾ ಕಾರ್ಮಿಕರು ಕೆಲಸ ಮಾಡಿದ್ದರೂ, ಅವರಿಗೆ ಒಬ್ಬರಿಗೆ ಕೊಟ್ಟು, ಒಬ್ಬರಿಗೆ ಬಿಡುವುದು ಅಂದರೆ ಏನು ? ಒಂದೇ ಸಮನಾಗಿ ಎಲ್ಲರಿಗೂ ಈ ಅಧಿಕ ಕಾಲದ ಭತ್ಯೆ ಕೊಡುವುದು ನ್ಯಾಯವಿದೆ. ಇದರಲ್ಲಿ ತಾರತಮ್ಯವನ್ನು ತೋರಿಸಿದ್ದಾರೆ. ಅವರು ಕೊಟ್ಟಿರತಕ್ಕಂಥ ಬೇಡಿಕೆಯಲ್ಲಿ ಇದು ಇದೆ. ಈ ಕಾರ್ಮಿಕ ಸಂಘದ ಅಧ್ಯಕ್ಷರೂ, ಉಗ್ರಪ್ಪ ಎಂದು ಯುವಜನತಾ ಅಧ್ಯಕ್ಷರೂ ಕೂಡ. ಇವರೂ ಕೂಡ ಅನೇಕ ಬಾರಿ ಪ್ರಯತ್ನಿತ ಪಟ್ಟರೂ ಈ ತಾರತಮ್ಯವನ್ನು ಸರಿಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಯಾರು ಇವರಿಗೆ ಅನುಕೂಲವಾಗಿ ನಡೆದುಕೊಳ್ಳುತ್ತಾರೆ, ಅವರಿಗೆ ಮಾತ್ರ ಪ್ರೋತ್ಸಾಹ ದೊರೆಯುತ್ತದೆ.